## ಬ್ರಶ್!

ನಗರದಲ್ಲಿ ಹುಟ್ಟಿ ಬೆಳೆದ ಗೀತಾ ಹಳ್ಳಿಯ ಹುಡುಗನ ಜೊತೆ ಮದುವೆಯಾಗಿ ಹೋದಳು. ಹೊಸದಾಗಿ ಅತ್ತೆ ಮನೆಗೆ ಹೋದಾಗ ಮಾರನೇ ದಿನ ಬೆಳಗ್ಗೆ ಅವಳ ಅತ್ತೆ, 'ಹೋಗಿ ಎಮ್ಮೆಗೆ ಹುಲ್ಲು ಹಾಕಿ ಬಾಮ್ಮ' ಎಂದು ಹೇಳಿದರು. ಹುಲ್ಲು ಹಾಕಲು ಹೋದ ಸೊಸೆ, ಮೆಲುಕು ಹಾಕುತ್ತಿದ್ದ ಎಮ್ಮೆಯ ಬಾಯಿ ತುಂಬಾ ನೊರೆ ಇರುವುದನ್ನು ಕಂಡು ಹಿಂತಿರುಗಿದಳು. 'ಏನಾಯಿತು, ಯಾಕೆ ಹುಲ್ಲು ಹಾಕಲಿಲ್ಲ' ಎಂದು ಅತ್ತೆ ಕೇಳಿದಾಗ, ಸೊಸೆ ಉತ್ತರಿಸಿದಳು, 'ಎಮ್ಮೆ ಈಗಷ್ಟೇ ಬ್ರಶ್ ಮಾಡ್ತಿದೆ ಅತ್ತೆ, ಅದು ಬಾಯಿ ತೊಳ್ಕೊಂಡ ಮೇಲೆ ಹೋಗಿ ಹುಲ್ಲು ಹಾಕುವೆ' ಅತ್ತೆ ಸುಸ್ತು!

**ರಮಣ್ ಶೆಟ್ಟಿ ರೆಂಜಾಳ್**





## ಚಾಲಾಕಿ ಟೀಚರ್

ಐವರು ಡಾಕ್ಟರ್ ಮೂವರು ಎಂಜಿನಿಯರ್, ಇಬ್ಬರು ವಿಜ್ಞಾನಿಗಳು ಹಾಗೂ ಒಬ್ಬ ಟೀಚರ್ ಹೆಲಿಕ್ಯಾಪ್ಟರ್ ಹಗ್ಗಕ್ಕೆ ನೇತಾಡುತ್ತಿದ್ದರು. ಪೈಲಟ್ ಹೇಳಿದ, 'ತೂಕ ಜಾಸ್ತಿ ಆಗಿದೆ, ಯಾರಾದರೂ ಒಬ್ಬರು ಹಗ್ಗ ಬಿಡಲೇಬೇಕು' ಎಂದು. ಟೀಚರ್ ಹೇಳಿದ, 'ನಾನು ಟೀಚರ್, ಸಮಾಜ ಸೇವಕ. ನಾನು ಯಾವಾಗಲೂ ಬೇರೆಯವರ ಬಗ್ಗೆ ಯೋಚಿಸುತ್ತೇನೆ. ಹೀಗಾಗಿ ನಾನೇ ಕೈ ಬಿಡುತ್ತೇನೆ. ನನ್ನ ಈ ಬಲಿದಾನಕ್ಕೆ ನೀವೆಲ್ಲಾ ಒಮ್ಮೆ ಚಪ್ಪಾಳೆಯಾದರೂ ಹೊಡೆಯಿರಿ...' ಅಂದಿದ್ದೇ ತಡ ವಿಜ್ಞಾನಿ, ಡಾಕ್ಟರ್ ಮತ್ತು ಎಂಜಿನಿಯರ್ ಎಲ್ಲರೂ ಚಪ್ಪಾಳೆ ತಟ್ಟಿದರು. ತೂಕ ತಾನಾಗೇ ಕಡಿಮೆ ಆಯ್ತು. ನೀವು ಎಷ್ಟೇ ದೊಡ್ಡ ಸೈಂಟಿಸ್ಟ್, ಡಾಕ್ಟರ್ ಅಥವಾ ಎಂಜಿನಿಯರ್ ಆಗಿದ್ದರೂ ಶಿಕ್ಷಕನನ್ನು ಮೀರಿಸಲಾರಿರಿ.

**ವಿ. ಹೇಮಂತ ಕುಮಾರ್**